ಯೌವ್ವನದಲ್ಲಿದ್ದ ದಟ್ಟ ತಲೆಗೂದಲು ಮಧ್ಯವಯಸ್ಸು ಆಗುತ್ತಿದ್ದಂತೆ ವಿರಳವಾಗುತ್ತಾ ಹೋಗುವುದು ಜಗದ ನಿಯಮ. ನಾವು ವಯಸ್ಕರಾಗುತ್ತಾ ಸಾಗಿದಂತೆ ಮದುವೆ, ಮಕ್ಕಳು, ಉದ್ಯೋಗ ಎಲ್ಲಾ ದೊರಕುತ್ತಾ ಹೋದಂತೆ ಸುಖ, ಸಂತೋಷ, ಬಡತನ, ಸಿರಿತನ, ನೋವು, ನಲಿವು, ನೆಮ್ಮದಿ ಎಲ್ಲಾ ನಮ್ಮ ನಮ್ಮ ಅದೃಷ್ಟ ಮತ್ತು ಪ್ರಯತ್ನಗಳಿಗನುಸಾರವಾಗಿ ದೊರಕುತ್ತಾ ಹೋಗುತ್ತವೆ. ನಮ್ಮ ಜೀವನದಲ್ಲಿ ಬರುವ ನಾಲ್ಕು ಹಂತಗಳಂತೆಯೇ ಕೂದಲ ಜೀವನದಲ್ಲೂ ಕೂಡ ಅನಾಜನ್, ಕೆಟಾಜನ್, ಟೆಲೋಜನ್ ಮತ್ತು ಎಕ್ಸೊಜನ್ ಎಂಬ ನಾಲ್ಕು ಹಂತಗಳಿವೆ. ನಮ್ಮ ಬಾಲ್ಯ ಮತ್ತು ಯೌವ್ವನಾವಸ್ಥೆಯಲ್ಲಿ ಕೂದಲು ಹೆಚ್ಚುಹೆಚ್ಚು ಹುಟ್ಟುವ ಮತ್ತು ಬೆಳೆಯುವ ಹಂತಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ವಯಸ್ಸಾಗುತ್ತಾ ಸಾಗಿದಂತೆ ಕೂದಲು ಹುಟ್ಟುವುದಕ್ಕಿಂತ ಹೆಚ್ಚಾಗಿ ಉದುರುವ ಹಂತದಲ್ಲಿರುತ್ತದೆ. ಆದ್ದರಿಂದ ಬಾಲ್ಯ ಮತ್ತು ಯೌವ್ವನದಲ್ಲಿ ದಟ್ಟವಾಗಿದ್ದ ತಲೆಗೂದಲು ಬರುಬರುತ್ತಾ ತೆಳುವಾಗುತ್ತಾ ಹೋಗುತ್ತದೆ. ನಮ್ಮ ಕೊನೆಯ ಹಂತ ಬಂದಾಗ ದೇಹವು ನೆಲಕ್ಕೆ ಒರಗುವಂತೆ ಕೂದಲೂ ಕೂಡ ತನ್ನ ಕೊನೆಯ ಹಂತದಲ್ಲಿ ಉದುರಿಹೋಗುತ್ತದೆ. ಇದು ಪ್ರಪಂಚದಲ್ಲಿ ಸರ್ವೇಸಾಮಾನ್ಯವಾಗಿ ನಡೆಯುವ ಸಂಗತಿ. ಹಾಗಾಗಿ ಮಧ್ಯವಯಸ್ಸು ದಾಟಿದ್ದರೂ ಹೆಂಗಸರು ತಮ್ಮ ಮೋಟು ಜಡೆಗಳನ್ನು ಕಂಡು ಕೊರಗುವುದನ್ನು ಮತ್ತು ಗಂಡಸರು ತಲೆಯ ತುಂಬಾ ಕೂದಲಿರುವ ತಮ್ಮ ಹಳೆಯ ಫೋಟೊಗಳನ್ನು ನೋಡುತ್ತಾ ದುಃಖಪ್ಪಗಳಾಗುವುದನ್ನು ಬಿಡಬೇಕು.

ಜೀವನದಲ್ಲಿ ಹಣ, ಅಂತಸ್ತು, ಹೆಸರು, ನೆಮ್ಮದಿ ಹೀಗೆ ಎಲ್ಲವನ್ನೂ ಗಳಿಸಲು ಮನುಷ್ಯ ಹೋರಾಡುತ್ತಲೇ ಇರುತ್ತಾನೆ. ಒಂದನ್ನು ಗಳಿಸಲು ಮತ್ತೊಂದನ್ನು ಕಳೆದುಕೊಳ್ಳಬೇಕಾಗುತ್ತದೆ. ಕೆಲವರು ನೆಮ್ಮದಿ ಕಳೆದುಕೊಂಡರೆ ಮತ್ತೆ ಕೆಲವರು ಆರೋಗ್ಯ ಕಳೆದುಕೊಳ್ಳುತ್ತಾರೆ ಮತ್ತೂ ಕೆಲವರು ತಲೆಗೂದಲು ಕಳೆದುಕೊಳ್ಳುತ್ತಾರೆ. ಸುಖ, ಸಂತೋಷ ಗಳಿಕೆ ಜಾಸ್ತಿಯಾದಂತೆಲ್ಲಾ ಜೊತೆಗೇ ಬರುವ ಬೊಜ್ಜು ಹೋಗುವುದಿಲ್ಲ ಹಾಗೆಯೇ ಹೋದ ಕೂದಲು ಮತ್ತೆ ಬರುವುದೂ ಇಲ್ಲ. ಎಲ್ಲರೂ ತಲೆಗೂದಲ ಬಗ್ಗೆ ಏಕಿಷ್ಟು ತಲೆಕೆಡಿಸಿಕೊಳ್ಳುತ್ತಾರೆ ಎಂದು ಯೋಚಿಸಿದರೆ, ತಲೆಗೂದಲು ಉದುರಿ ಬೋಳುತಲೆಯಾದಾಗ ಮಾತ್ರ ಮನುಷ್ಯನಿಗೆ ತನಗೂ ವಯಸ್ಸಾಗುತ್ತಿದೆ ಅಥವಾ ವಯಸ್ಸಾದಂತೆ ಕಾಣುತ್ತಿದ್ದೇನೆ ಎಂಬ ಅರಿವಾಗುತ್ತದೆ. ಮನುಷ್ಯನಿಗೆ ಮೊದಲಿನಿಂದಲೂ ಯಯಾತಿಯಂತೆ ಚಿರಯೌವ್ವನಿಗನಾಗಿ ಬದುಕಬೇಕು ಎಂಬ ಅಭಿಲಾಷೆ. ಆದ್ದರಿಂದಲೇ ತಲೆಯಲ್ಲಿ ಬಿಳಿಕೂದಲು ಬಂದ ತಕ್ಷಣ ಅದಕ್ಕೆ ಕಪ್ಪುಬಣ್ಣ ಹಚ್ಚಿ ತನಗೆ ವಯಸ್ಸಾಗಿಲ್ಲ ಎಂದು ಸಾಧಿಸಲು ಹೆಣಗುತ್ತಾನೆ. ಅದೇ ರೀತಿ ತಲೆಗೂದಲು ಉದುರದಂತೆ ತಡೆಯಲು ಇನ್ನಿಲ್ಲದಂತೆ ಸರ್ಕಸ್ ಮಾಡುತ್ತಾನೆ.

ಕಾಲ ಸರಿಯುತ್ತಾ ಬಂದಂತೆ ನಮ್ಮ ಜೀವನವೂ ಮಾಗುತ್ತದೆ. ಜೀವನದ ನಶ್ವರತೆಯ ಬಗ್ಗೆ ಪುಂಖಾನುಪುಂಖವಾಗಿ ಪುಂಗುವ ನಾವು ಈ ತಲೆಗೂದಲ ಬಗ್ಗೆ ಮಾತ್ರ ವಿಚಿತ್ರ ವ್ಯಾಮೋಹ ಬೆಳೆಸಿಕೊಂಡಿರುತ್ತೇವೆ. ಮರಗಳಲ್ಲಿ ಎಲೆಗಳು ಕೂಡ ಕ್ರಮೇಣ ಒಣಗಿ ಉದುರಿ ಬೀಳುವಂತೆ ನಮ್ಮ ಕೂದಲೂ ಸಹ ವಯಸ್ಸಾಗುತ್ತಿದ್ದಂತೆ ಬಿದ್ದು ಹೋಗುತ್ತದೆ. ಇಂತಹ ದೊಡ್ಡ ದೇಹವೇ ಕಾಲನ ಕರೆ ಬಂದಾಗ ನೆಲಕ್ಕೆ ಬೀಳುವಾಗ, ಯಕಃಶ್ಚಿತ್ ಕೂದಲು ಯಾವ ಲೆಕ್ಕ ಹೇಳಿ? ಇದನ್ನು ಅರ್ಥ ಮಾಡಿಕೊಂಡು ಮುಂದೆ ಸಾಗಿದರೆ ಜೀವನದಲ್ಲಿ ಸಂತೋಷವಾಗಿರಬಹುದು. ಈ ನಶ್ವರತೆಯ ತತ್ವವನ್ನು ಒಪ್ಪಲು ಕಷ್ಟವಾದರೆ ಹೆಂಗಸರು ಚೌವುಲಿ ಕೂದಲನ್ನೂ ಹಾಗೂ ಗಂಡಸರೂ ಕೂಡ ಬೀದಿಬೀದಿಗಳಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ವಿಗ್ ಮತ್ತು ಹೇರ್ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸಾಲಯಗಳಿಗೆ ಭೇಟಿಕೊಟ್ಟು ತಲೆಗೂದಲ ರೂಪದಲ್ಲಿ ಉದುರಿ ಹೋದ ರೂಪ ಮತ್ತು ನೆಮ್ಮದಿಯನ್ನು ಮತ್ತೆ ಪಡೆಯಬಹುದು. ವಯಸ್ಸು ಮಾಗುತ್ತಾ ಬಂದಂತೆ ಉದುರುವ ತಲೆಕೂದಲು ಮನುಷ್ಯನಿಗೆ ಜೀವನದ ನಶ್ವರತೆಯ ಬಗ್ಗೆ ಬೋಧಿಸುತ್ತದೆ, ಇಲ್ಲಿ ಯಾವುದೂ ಶಾಶ್ವತವಲ್ಲ ಎಂಬ ತತ್ವವನ್ನು ಮನನ ಮಾಡಿಸುತ್ತದೆ. ಈ ಅಂಶ ತಲೆಗೂದಲ ಕೆಳಗೇ ಇರುವ ಪ್ರತಿಯೊಬ್ಬರ ಮಿದುಳಿಗೆ ಅರ್ಥವಾದರೆ ಕೂದಲ ಬಗ್ಗೆ ಜನರಿಗೆ ಇರುವ ವ್ಯಾಮೋಹವಾದರೂ ಕಡಿಮೆಯಾದೀತು.

●